40

# ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಕಂ/ಹಬ/ವಿವಾದ/127/2014-15 ದಿ:06-05-2016

| ವಾದಿಗಳು | ವಿರುದ್ಧ | ಪ್ರತಿವಾದಿಗಳು |
|---|---|---|
| ಈರಮ್ಮ ಗಂಡ ಮಲ್ಲಪ್ಪ ಊಳೂರು ಗ್ರಾಮ ಊಳೂರು ಗ್ರಾಮ. | ------------------ | ಬಿ.ಚಲುವಪ್ಪ ತಂದೆ ಲೇಟ್ ಸಿದ್ದಲಿಂಗಪ್ಪ ಊಳೂರು ಗ್ರಾಮ. |

ವಾದಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕೆ.ಬೆಳಗಲ್ಲು | 272/ಸಿ | 3-44 | ಖುಷ್ಕಿ |

ಪ್ರಸ್ತಾವನೆ:-

ಸಿರುಗುಪ್ಪ ತಾಲೂಕು ಕೆ.ಬೆಳಗಲ್ಲು ಗ್ರಾಮದ ಸ,ನಂ.272/ಸಿ ವಿ:3-44 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಈರಣ್ಣ ತಂದೆ ಲೇಟ್ ವೆಂಕೋಬಪ್ಪ ಹೆಸರಿಗೆ ವಿ:1-72, ಚಲುವಪ್ಪ ತಂದೆ ಲೇಟ್ ಸಿದ್ದಲಿಂಗಪ್ಪ, ಹುಚ್ಚಪ್ಪ ತಂದೆ ಲೇಟ್ ಸಿದ್ದಲಿಂಗಪ್ಪ ವಿ:1-72 ಎಕ್ರೆ ಜಂಟಿಯಾಗಿ ಪಟ್ಟಾ ಇದ್ದು, ವಂಶವೃಕ್ಷ ಪ್ರಕಾರ ಹುಚ್ಚಪ್ಪ, ಚೆಲುವಪ್ಪ ಇವರ ಸಹೋದರಿ ಈರಮ್ಮ ಗಂಡ ಮಲ್ಲಪ್ಪ ಇವರು ತಮ್ಮ ಹೆಸರಿಗೆ ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ ಪ್ರಕಾರ ಅದರಂತೆ ಕ್ರಮ ಜರುಗಿಸಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಕರೂರು ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಕೆ.ಬೆಳಗಲ್ಲು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಬಿ.ಚಲುವಪ್ಪ ತಂದೆ ಲೇಟ್ ಸಿದ್ದಲಿಂಗಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ:18-03-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಕರೂರು ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:57/2012-13 ದಿ:30-03-2013 ರ ಪ್ರಕಾರ ಮೊದಲಿಗೆ ಉಪ-ತಹಶೀಲ್ದಾರರು ಕರೂರು ಇವರ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿದ್ದು, ನಂತರ ದಿ:06-02-2015 ರಂದು ಉಪ-ತಹಶೀಲ್ದಾರರು ಈ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಸದ್ರಿ ಹಕ್ಕು ಬದಲಾವಣೆ ಪ್ರಕ್ರಿಯೆಯನ್ನು ರದ್ದುಗೊಳಿಸಿ, ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾಸ್ಥಿತಿಯಲ್ಲಿಡಲು ಕೋರಿದ ಮೇರೆಗೆ, ಲಿಖಿತ ಹೇಳಿಕೆ ಹಾಜರುಪಡಿಸಲು ತಿಳಿಸಲಾಯಿತು.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

(38)

ಸದ್ರಿಯವರು ದಿನಾಂಕ:13-04-2016 ರಂದು ಲಿಖಿತ ಹೇಳಿಕೆಯನ್ನು ಹಾಜರುಪಡಿಸಿದ್ದು, ಸಿರುಗುಪ್ಪ ತಾಲೂಕು ಕೆ.ಬೆಳಗಲ್ಲು ಗ್ರಾಮ ಸ.ನಂ.272/ಸಿ ವಿ:3-44 ಎಕ್ರೆ ಜಮೀನಿಗೆ ಸಲ್ಲಿಸಿದ ಹಕ್ಕು ಬದಲಾವಣೆ ಅರ್ಜಿಯನ್ನು ಹಿಂಪಡೆಯುವುದಾಗಿ ಮತ್ತು ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾಸ್ಥಿತಿಯಲ್ಲಿಡಲು ಕೋರಿದ ಮೇರೆಗೆ ಈ ಕೆಳಕಂಡಂತೆ-

ನಂ.ಕಂ/ಹಬ/ವಿವಾದ/127/2014-15 ದಿ:06-05-2016

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕೆ.ಬೆಳಗಲ್ಲು ಗ್ರಾಮದ ಸ.ನಂ.272/ಸಿ ವಿ:3-44 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಈರಣ್ಣ ತಂದೆ ಲೇಟ್ ವೆಂಕೋಬಪ್ಪ ಹೆಸರಿಗೆ ವಿ:1-72, ಚಲುವಪ್ಪ ತಂದೆ ಲೇಟ್ ಸಿದ್ದಲಿಂಗಪ್ಪ, ಹುಚ್ಚಪ್ಪ ತಂದೆ ಲೇಟ್ ಸಿದ್ದಲಿಂಗಪ್ಪ ವಿ:1-72 ಎಕ್ರೆ ಜಂಟಿಯಾಗಿ ಪಟ್ಟಾ ಇದ್ದು, ಈರಮ್ಮ ಗಂಡ ಮಲ್ಲಪ್ಪ ಇವರು ಸಲ್ಲಿಸಿದ ಹಕ್ಕು ಬದಲಾವಣೆ ಅರ್ಜಿಯನ್ನು ಹಿಂಪಡೆಯುವುದಾಗಿ ತಿಳಿಸಿ ಲಿಖಿತ ಹೇಳಿಕೆ ಹಾಜರುಪಡಿಸಿದ ಮೇರೆಗೆ, ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾಸ್ಥಿತಿಯಲ್ಲಿಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:06-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಪ್ರತಿ:
1. ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2. ವಾದಿ-ಪ್ರತಿವಾದಿಗಳಿಗೆ
3. ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ